ಕರ್ನಾಟಕ ಸರ್ಕಾರ – ಅರಣ್ಯ ಇಲಾಖೆ

**ಪ್ರಧಾನ ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿ (ಮುಖ್ಯಸ್ಥರು, ಅರಣ್ಯ ಪಡೆ) ಹಾಗೂ ಆಯ್ಕೆ ಪ್ರಾಧಿಕಾರ ಇವರ ಕಛೇರಿ, ಅರಣ್ಯ ಭವನ, ಮಲ್ಲೇಶ್ವರಂ, ಬೆಂಗಳೂರು–560003**

**ಅಧಿಸೂಚನೆ ಸಂಖ್ಯೆ: ಬಿ9–ನೇಮಕಾತಿ–ಸ್ಪೋರ್ಟ್ಸ್–ವಿವ–1/2015–16 ದಿನಾಂಕ: 03.07.2015**

# ಪ್ರಕಟಣೆ

ದಿನಾಂಕ: 17.10.2015 ರಂದು ಪೂರ್ವಾಹ್ನ 10.30 ರಿಂದ 12.30 ರ ವರೆಗೆ ಉಪ ವಲಯ ಅರಣ್ಯಾಧಿಕಾರಿ ಹುದ್ದೆಯ (ಸ್ಪೋರ್ಟ್ಸ್ ಕೋಟಾ) 1:5 ಪಟ್ಟಿಯಲ್ಲಿರುವ ಅಭ್ಯರ್ಥಿಗಳಿಗೆ ಅರಣ್ಯ ಭವನದ 8ನೇ ಮಹಡಿಯ ಸಭಾಂಗಣದಲ್ಲಿ ಲಿಖಿತ ಪರೀಕ್ಷೆಯನ್ನು ಏರ್ಪಡಿಸಲಾಗಿರುತ್ತದೆ. ಕರ್ನಾಟಕ ಆಡಳಿತ ನ್ಯಾಯ ಮಂಡಳಿಯ ಅರ್ಜಿ ಸಂಖ್ಯೆ: 7916/2015 ರಲ್ಲಿ ಶ್ರೀ ಅಕ್ಷಯ ಅಂಗಡಿ ಹಾಗೂ ಕರ್ನಾಟಕ ಆಡಳಿತ ನ್ಯಾಯ ಮಂಡಳಿಯ ಅರ್ಜಿ ಸಂಖ್ಯೆ: 7917/2015 ರಲ್ಲಿ ಶ್ರೀ ಅಮಿತ್ ಜಿ. ಕೋರಿ ಇವರು ಈಗಾಗಲೇ ಪ್ರಕಟಿಸಲಾಗಿರುವ 1:5 (ಹುದ್ದೆ/ಅಭ್ಯರ್ಥಿ) ಪಟ್ಟಿಯ ವಿರುದ್ಧ ಮಾನ್ಯ ಕರ್ನಾಟಕ ಆಡಳಿತ ನ್ಯಾಯ ಮಂಡಳಿಯಲ್ಲಿ ದಾವೆ ಸಲ್ಲಿಸಿದ್ದು, ಮಾನ್ಯ ಕರ್ನಾಟಕ ಆಡಳಿತ ನ್ಯಾಯ ಮಂಡಳಿಯು ಸದರಿ ದಿನಾಂಕದಂದು ನಡೆಯುವ ಲಿಖಿತ ಪರೀಕ್ಷೆಯಲ್ಲಿ ಭಾಗವಹಿಸಲು ಅವಕಾಶ ನೀಡುವಂತೆ ಮಧ್ಯಾಂತರ ಆದೇಶ ಹೊರಡಿಸಿರುತ್ತದೆ. ಅದರಂತೆ, ಶ್ರೀ ಅಕ್ಷಯ ಅಂಗಡಿ ಹಾಗೂ ಶ್ರೀ ಅಮಿತ್ ಜಿ. ಕೋರಿ ಇವರುಗಳು ಲಿಖಿತ ಪರೀಕ್ಷೆಗೆ ಹಾಜರಾಗಿರುತ್ತಾರೆ. ಆದರೆ, ಲಿಖಿತ ಪರೀಕ್ಷೆಯಲ್ಲಿ ಇವರು ಪಡೆದ ಅಂಕಗಳನ್ನು ಈ ವರೆಗೆ ಪ್ರಕಟಿಸಲಾಗಿರುವುದಿಲ್ಲ.

ಮಾನ್ಯ ಕರ್ನಾಟಕ ಆಡಳಿತ ನ್ಯಾಯ ಮಂಡಳಿಯು ದಿನಾಂಕ: 11.09.2017 ರ ಮಧ್ಯಾಂತರ ಆದೇಶದಲ್ಲಿ "Interim order has already been granted in favour of the applicant to apopera for the written test subject to the final decision in this application. It is submitted that the applicant has already appeared for written test. Therefore, the authority concnerend will have to anouce the result and intimate this Tribunal"

ದಿನಾಂಕ: 30.01.2018 ರ ಮಧ್ಯಾಂತರ ಆದೇಶದಲ್ಲಿ "learned Government Pleader is presnt. The order dated: 11.09.2017 is not complied with.

As a last chance, call this case on 28.02.2018 for compliance of the earlier order."

ಮೇಲ್ಕಂಡ ಮಾನ್ಯ ಕರ್ನಾಟಕ ಆಡಳಿತ ನ್ಯಾಯ ಮಂಡಳಿಯ ಮಧ್ಯಾಂತರ ಆದೇಶದಂತೆ ಶ್ರೀ ಅಮಿತ್ ಜಿ. ಕೋರಿ, ನೋಂದಣಿ ಸಂಖ್ಯೆ: 10158 ಇವರು ಲಿಖಿತ ಪರೀಕ್ಷೆಯಲ್ಲಿ ಗರಿಷ್ಠ 100 ಅಂಕಗಳಿಗೆ 50 ಅಂಕಗಳನ್ನು ಗಳಿಸಿರುತ್ತಾರೆಂದು ಹಾಗೂ ಶ್ರೀ ಅಕ್ಷಯ ಅಂಗಡಿ, ನೋಂದಣಿ ಸಂಖ್ಯೆ: 10194 ಇವರು ಲಿಖಿತ ಪರೀಕ್ಷೆಯಲ್ಲಿ ಗರಿಷ್ಠ 100 ಅಂಕಗಳಿಗೆ 44 ಅಂಕಗಳನ್ನು ಗಳಿಸಿರುತ್ತಾರೆಂದು ಈ ಮೂಲಕ ಪ್ರಕಟಿಸಲಾಗಿದೆ.

ಪ್ರಧಾನ ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿ
(ಮುಖ್ಯಸ್ಥರು, ಅರಣ್ಯ ಪಡೆ)

ದಿನಾಂಕ: 27.02.2018

ಪ್ರತಿಯನ್ನು ಮಾನ್ಯ ಸರ್ಕಾರಿ ವಕೀಲರು, ಮಾನ್ಯ ಕರ್ನಾಟಕ ಆಡಳಿತ ನ್ಯಾಯ ಮಂಡಳಿ ಇವರಿಗೆ ಮಾಹಿತಿಗಾಗಿ ಹಾಗೂ ಮುಂದಿನ ಕ್ರಮಕ್ಕಾಗಿ ಕಳುಹಿಸಿದೆ.